ಆಶ್ವಾಸನೆ ಕೊಟ್ಟಿದ್ದರು. ಆದರೆ ಏನೂ ಮುಗಿಯಲಿಲ್ಲ, ಅವರೂ ಹೋದರು. ಹೀಗೆ ಆಗಬಾರದು. ತಮ್ಮ ಕಾಲವಲ್ಲದಿದ್ದರೂ, ತಾವು ಇರುವುದರೊಳಗೆ ಈ ಕಾಮಗಾರಿಯನ್ನು ಪೂರ್ಣಗೊಳಿಸುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ.— ಮಾನ್ಯ ಅಧ್ಯಕ್ಷರೇ, ನಾನು ಫೈಲ್ ನೋಡಿದ್ದೇನೆ. ಮಾನ್ಯ ಬಸವಣ್ಣಪ್ಪನವರು ಆಶ್ವಾಸನೆ ಕೊಟ್ಟಿರುವುದು ನಿಜ. ಆದಾದ ಮೇಲೆ ಬಿಲ್ಡಿಂಗ್ ಕಂಪ್ಲೀಟ್ ಆಗಿರುವುದು ನಿಜ. ಕುಡಿಯುವ ನೀರಿನ ಬಗ್ಗೆ ನಾನು ಆದಷ್ಟು ಬೇಗ ವ್ಯವಸ್ಥೆ ಮಾಡಿಸಿ ಕೊಡುತ್ತೇನೆ.

ಅಂಗವಿಕಲ ಮಕ್ಕಳಿಗಾಗಿ ನೀಡುವ ಶಿಕ್ಷಣ ಸೌಲಭ್ಯಗಳ ಬಗ್ಗೆ

೫೨೬೮ ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಆಫಜಲಪುರ).— ಮಾನ್ಯ ಸಮಾಜ ಕಲ್ಯಾಣ, ಯುವಜನ ಸೇವಾ ಹಾಗೂ ಕ್ರೀಡಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಅಂಗವಿಕಲ ಮಕ್ಕಳಿಗಾಗಿ ರಾಜ್ಯದಲ್ಲಿ ಒಟ್ಟು ಎಷ್ಟು ಶಾಲೆಗಳಿವೆ; ಅವುಗಳಲ್ಲಿ ವಸತಿ ನಿಲಯಗಳಿವೆಯೆ?

(ಆ) ಅಂಗವಿಕಲರಿಗೆ ಸರ್ಕಾರಿ ಕೆಲಸಗಳನ್ನು ನೀಡುವಾಗ ಶೇಕಡಾ ಎಷ್ಟು ಮಿಸಲಾತಿ ನೀಡಲು ನಿಗದಿ ಪಡಿಸಲಾಗಿದೆ;

(ಇ) ಈ ಮಿಸಲಾತಿ ಪ್ರಮಾಣ ಕಡಿಮೆಯಾಗಿಲ್ಲವೇ, ಇದನ್ನು ಶೇ. ೧೦ ರಷ್ಟಕ್ಕೆ ಏರಿಸಲು ಆಲೋಚಿಸಿದೆಯೇ?

(ಈ) ಈ ವರ್ಷ ಎಷ್ಟು ಅಂಗವಿಕಲರಿಗೆ ಉದ್ಯೋಗ ನೀಡಲಾಗಿದೆ ತಿಳಿಸುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಮಾಜ ಕಲ್ಯಾಣ, ಯುವಜನ ಸೇವಾ ಮತ್ತು ಕ್ರೀಡಾ ಸಚಿವರು).—

(ಅ) ೧) ಸರ್ಕಾರದ ವತಿಯಿಂದ — ೮ ಶಾಲೆಗಳು

೨) ಸ್ವಯಂ ಸೇವಾ ಸಂಸ್ಥೆಯಿಂದ — ೬೦ ಶಾಲೆಗಳು

೮ ಸರ್ಕಾರಿ ಶಾಲೆಗಳಿಗೆ ವಸತಿ ನಿಲಯಗಳಿವೆ

೬೦ ಸ್ವಯಂ ಸೇವಾ ಸಂಸ್ಥೆಯ ಶಾಲೆಗಳಿಗೆ ೩೫ ವಸತಿಗಳಿವೆ.

(ಆ) ಶೇಕಡಾ ೪

ಕೇಂದ್ರ ಸರ್ಕಾರದ ನೀತಿಯಲ್ಲಿ ಶೇಕಡಾ ೩

(ಇ) ಮಿಸಲಾತಿ ಪ್ರಮಾಣವನ್ನು ಶೇ. ೪ ರಿಂದ ಶೇ. ೫ಕ್ಕೆ ಏರಿಸಲು ಪರಿಶೀಲಿಸಲಾಗುತ್ತದೆ. ಇದನ್ನು ಶೇ. ೧೦ಕ್ಕೆ ಏರಿಸಲು ಪರಿಶೀಲನೆಯಲ್ಲಿಲ್ಲ.

(ಈ) ೨೯೩ ಅಂಗವಿಕಲರಿಗೆ ಅವಕಾಶ ಕಲ್ಪಿಸಿದೆ.

ವಕೇಷನಲ್ ಟ್ರೈನಿಂಗ್ ಸೆಂಟರ್. ಬೆಂಗಳೂರು ೧೫೨ ಜನ ಅಂಗವಿಕರಿಗೆ ಉದ್ಯೋಗಾವಕಾಶ ಕಲ್ಪಿಸಿದೆ.

(ಪ್ರಾಸ್ತಾವನಾ ಸದಸ್ಯರಾದ ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್‌ರವರ ಪರವಾಗಿ ಶ್ರೀ ಕೆ.ಬಿ. ಶಾಣಪ್ಪನವರು ಪ್ರಶ್ನೆ ಕೇಳಿದರು)

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರದ ವತಿಯಿಂದ ಸುಮಾರು ೮ ಶಾಲೆಗಳನ್ನು ನಡೆಸುತ್ತಿದ್ದಾರೆ. ಇನ್ನುಳಿದ ೬೦ ಶಾಲೆಗಳನ್ನು ಖಾಸಗಿಯವರಿಗೆ ಕೊಟ್ಟಿದ್ದಾರೆ. ಅದರಲ್ಲಿ ೩೫ ಶಾಲೆಗಳಿಗೆ ತಮ್ಮದೇ ಆದ ಕಟ್ಟಡ ಇದೆ. ಇನ್ನು ಸುಮಾರು ೨೫ ಶಾಲೆಗಳಿಗೆ ಕಟ್ಟಡ ಇಲ್ಲ. ಖಾಸಗಿಯವರಿಗೆ ತಾವು ಪರ್ಮಿಷನ್ ಕೊಡುವಾಗ ಏನಾದರೂ ನಿರ್ಧಾರ ಮಾಡಿರಬೇಕು. ಅವರಿಗೆ ತಮ್ಮದೇ ಆದ ಕಟ್ಟಡವಿರಬೇಕು, ಅಲ್ಲಿ ಎಲ್ಲಾ ಅಂಗವಿಕಲ ಮಕ್ಕಳು ಇರುವುದರಿಂದ ಅವರಿಗೆ

ಬೇಕಾದಂತಹ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ನೀವು ಅವರಿಗೆ ಏನಾದರೂ ಕಂಡೀಷನ್ಸ್ ಹಾಕಿದ್ದರೆ ಆ ಕಂಡೀಷನ್ಸ್ ಅವರು ಫುಲ್‌ಫಿಲ್ ಮಾಡಿದ್ದಾರಾ ಹೇಗೆ ಮಾಡದಿದ್ದರೆ ಅವರ ಮೇಲೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಅಲ್ಲಿ ಸ್ವಯಂ ಸೇವಾ ಸಂಸ್ಥೆಯವರು ನಡೆಸುತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಬಹುಶಃ ಈ ಬಗ್ಗೆ ಮಾಹಿತಿ ಸರಿಯಾಗಿಲ್ಲವೆಂದು ಕಾಣುತ್ತದೆ. ಅವರು ತುಂಬಾ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಸ್ವಯಂ ಸೇವೆ ಮಾಡುತ್ತಿದ್ದಾರೆ. ಅವರ ಜೇಬಿನಿಂದ ಹಣ ಖರ್ಚ ಮಾಡುತ್ತಿದ್ದಾರೆ. ಅಲ್ಲಿ ಕೆಲಸ ಮಾಡತಕ್ಕಂಥ ಟೀಚರ್ಸ್‌ಗೆ ಮಾತ್ರ ಸರ್ಕಾರದಿಂದ ನೂರು ಪರ್ಸೆಂಟ್ ಹಣ ಕೊಡುತ್ತಿದ್ದು ಇನ್ನುಳಿದ ಬಾಕಿ ವೆಚ್ಚಗಳಿಗೆ ಸರ್ಕಾರ ೫೦ ಪರ್ಸೆಂಟ್ ಮಾತ್ರ ಹಣ ಕೊಡುತ್ತಿರುವುದು. ಅವರು ಸಾವಿರಾರು ಜನ ಸಾರ್ವಜನಿಕರಿಂದ ಹಣ ಸಂಗ್ರಹ ಮಾಡಿ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಸರ್ಕಾರ ಆದಷ್ಟು ಬೇಗ ಅವರಿಗೆ ಕಟ್ಟಡ ಕಟ್ಟಿಸಿ ಕೊಡಲಿಕ್ಕೆ ಹಣ ಸಿಗುವಂತಹ ಸಂದರ್ಭ ನೋಡಿಕೊಂಡು ಪೂರ್ಣ ಪ್ರಯತ್ನ ಮಾಡುತ್ತದೆ. ಸ್ವಯಂ ಸೇವಾ ಸಂಸ್ಥೆಯವರನ್ನು ನಾನು ಈ ಸಂದರ್ಭದಲ್ಲಿ ಪ್ರಶಂಸೆ ಮಾಡಬೇಕಾಗುತ್ತದೆ. ಆದ್ದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ.ಬಿ. ಶಾಣಪ್ಪ.—ಅದು ಸ್ವಯಂ ಸೇವಾ ಸಂಸ್ಥೆಯವರು ನಡೆಸುತ್ತಿರುವುದು ಪಾಪ, ಅವರ ಸರ್ವೀಸಸ್ ಕೂಡ ನನಗೆ ಗೊತ್ತಿದೆ. ಈಗ ಅಲ್ಲಿರುವ ಪ್ರಶ್ನೆ ಎನೆಂದರೆ ಅಂಗವಿಕಲ ಮಕ್ಕಳಿಗೆ ಅಲ್ಲಿ ಈಗ ಕಟ್ಟಡ ಇಲ್ಲ. ಕಟ್ಟಡವಿಲ್ಲದೆ ಯಾವುದೇ ಸಂಸ್ಥೆಗಳು ನಡೆಸಿದರೂ ಒಳ್ಳೆಯ ಪರಿಸರ ಕೊಟ್ಟಂತೆ ಆಗುವುದಿಲ್ಲ ಆದ್ದರಿಂದ ಸರ್ಕಾರದವರು ಈ ಸಂಸ್ಥೆಗಳಿಗೆ ಆದಷ್ಟು ಸಹಾಯ ಮಾಡಿ ಕಟ್ಟಡವನ್ನು ಕಟ್ಟಿಸಿಕೊಡಬೇಕು. ಅಲ್ಲಿರುವ ೨೯೩ ಜನ ಮಕ್ಕಳಿಗೆ ಕೆಲಸವನ್ನು ಕೊಟ್ಟಿದ್ದೇವೆಂದು ತಾವು ಸಮ್ಮ ಉತ್ತರದಲ್ಲಿ ಹೇಳಿದ್ದೀರಿ ಮತ್ತು ಪರ್ಸೆಂಟೇಜ್ ಬಗ್ಗೆ ಕೂಡ ಆ ಮಕ್ಕಳು ನನ್ನ ಹತ್ತಿರ ಬಂದು ಹೇಳಿದ್ದಾರೆ ಆದ್ದರಿಂದ ಈಗ ಇರುವ ಪರ್ಸೆಂಟೇಜ್ ಅನ್ನು ೧೦೦ ಪರ್ಸೆಂಟ್‌ಗೆ ಹೆಚ್ಚು ಮಾಡಬೇಕು. ಯಾವುದೇ ಒಂದು ಸರ್ಕಾರಿ ಸೇವೆಯಲ್ಲಿ ಇವರಿಗೆ ಇಟ್ಟಿರುವ ಪರ್ಸಂಟೇಜ್ ಏನಿದೆ ಅದು ಸರಿಯಾಗಿ ಫುಲ್‌ಫಿಲ್ ಆಗುತ್ತಿಲ್ಲ. ಇದರಿಂದ ಈ ಮಕ್ಕಳಿಗೆ ಸರಿಯಾಗಿ ಕೆಲಸಗಳು ಸಿಗುತ್ತಿಲ್ಲ. ದಯಮಾಡಿ ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ಅಂಗವಿಕಲ ಮಕ್ಕಳಿಗೆ ಸರ್ಕಾರಿ ನೌಕರಿಯನ್ನು ಎಷ್ಟು ಜನರಿಗೆ ಕೊಟ್ಟಿದ್ದೀರಿ ಎನ್ನುವುದನ್ನು ದಯಮಾಡಿ ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ.—ಮಾನ್ಯ ಅಧ್ಯಕ್ಷರೇ, ಗುಲ್ಬರ್ಗ ಜಿಲ್ಲೆಯಲ್ಲಿ ಎಷ್ಟು ಜನರಿಗೆ ಸರ್ಕಾರಿ ನೌಕರಿ ಸಿಕ್ಕಿದೆ ಎನ್ನುವ ಮಾಹಿತಿ ಈಗ ನನ್ನಲ್ಲಿ ಇಲ್ಲ. ಬೇಕಾದರೆ ತರಿಸಿ ಕೊಡುತ್ತೇನೆ ಮತ್ತು ಅವರಿಗೆ ರಿಜರ್ವೇಷನ್ ಅನ್ನು ೧೦ ಪರ್ಸೆಂಟ್‌ಗೆ ಜಾಸ್ತಿ ಮಾಡತಕ್ಕಂಥಾದ್ದಕ್ಕೆ ಸಾಧ್ಯವಿಲ್ಲ. ಈಗ ಇರತಕ್ಕಂಥ ಪರ್ಸೆಂಟೇಜ್‌ನ್ನು ೫ ಪರ್ಸೆಂಟ್ ಹೆಚ್ಚು ಮಾಡುವ ಬಗ್ಗೆ ನಾವು ಪರಿಶೀಲನೆಯನ್ನು ಮಾಡುತ್ತಿದ್ದೇವೆ.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ಒಟ್ಟು ಎಷ್ಟು ಜನ ಅಂಗವಿಕಲ ಮಕ್ಕಳು ಈ ಶಾಲೆಗಳಿಂದ ಉತ್ತೀರ್ಣರಾಗುತ್ತಿದ್ದಾರೆ ಮಾನ್ಯ ಮಂತ್ರಿಗಳ ಉತ್ತರದ ಪ್ರಕಾರ ೨೯೩ ಜನರಿಗೆ ಉದ್ಯೋಗ ಕೊಟ್ಟಿದ್ದೇವೆಂದು ಹೇಳಿದ್ದಾರೆ ಇನ್ನು ಎಷ್ಟು ಮಕ್ಕಳಿಗೆ ಕೆಲಸ ಕೊಡಬೇಕಾಗಿದೆ ಎಂಬುದನ್ನು ದಯವಿಟ್ಟು ತಿಳಿಸಬೇಕು ಎರಡನೆಯದಾಗಿ, ಕೆಎಸ್‌ಆರ್‌ಟಿಸಿಯಲ್ಲಿ ಇವರಿಗೆ ಪರ್ಸೆಂಟೇಜ್ ಏನಿದೆ ? ನಾನು ಒಬ್ಬ ಅಂಗವಿಕಲ ಹುಡುಗನನ್ನು ಈ ಇಲಾಖೆಯ ಅಧಿಕಾರಿ ಹತ್ತಿರ ಫುಟ್ಪರ್ ಕೆಲಸಕ್ಕೆ ಕಳುಹಿಸಿದೆ ಆದಕ್ಕೆ ಅಲ್ಲಿನ ಡಿ.ಸಿ.ಯವರು ಇಲ್ಲಿ ಚೆನ್ನಾಗಿರುವವರಿಗೆ ಕೆಲಸ ಕೊಡಲಿಕ್ಕೆ ಆಗುವುದಿಲ್ಲ ಇನ್ನು ನಿನಗೆ ಯಾರು ಕೆಲಸ ಕೊಡಬೇಕೆಂದು ಹೇಳಿದರೆಂದು ಹೇಳಿ ಕಳುಹಿಸಿದ್ದಾರೆ ಆದ್ದರಿಂದ ಈ ವಿಚಾರವನ್ನು ತಾವು ಪರಿಶೀಲನೆ ಮಾಡಬೇಕು ಅಂಗವಿಕಲರಿಗೆ ಪ್ರೋತ್ಸಾಹ ಕೊಡುವುದು ಬಿಟ್ಟು ಅವರ ಮನಸ್ಸನ್ನು ನೋಯಿಸುವಂತಹ ಅಧಿಕಾರಿ ಮೇಲೆ ದಯಮಾಡಿ ತಾವು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಪಿ.ಜಿ. ಆರ್. ಸಿಂಧ್ಯಾ.— ಮಾನ್ಯ ಅಧ್ಯಕ್ಷರೇ, ನಾವು ಈ ವರ್ಷ ಅಂಗವಿಕಲರಿಗೆ ಒಂದು ನಿರ್ದೇಶನಾಲಯವನ್ನು ಮಾಡಿದ್ದೇವೆ ಅಂಗವಿಕಲರಿಗೆ ನಿರ್ದಿಷ್ಟವಾಗಿ ಇಂತಿಷ್ಟು ಪರ್ಸೆಂಟೇಜ್ ಎಂದು ನಿಗಧಿ ಮಾತಿದ್ದೇವೆ ಈ ನಿರ್ದೇಶನಾಲಯದವರು ಪಬ್ಲಿಕ್ ಸೆಕ್ಟಾರ್‌ನಲ್ಲಿ ಡಿಪಾರ್ಟ್‌ಮೆಂಟಲ್ ರಿಕ್ರೂಟ್‌ಮೆಂಟ್ ಕಮಿಟಿಗಳಲ್ಲಿ ಈ ರಿಜರ್ವೇಷನ್ ಫಾಲೋ ಮಾಡುತ್ತಿದ್ದಾರೋ ಇಲ್ಲವೋ

ಎನ್ನುವುದನ್ನು ಚೆಕ್ ಮಾಡಿ ರಿವ್ಯೂ ಮಾಡಿ ಅವರು ಪಾಲೋ ಮಾಡದಿದ್ದರೆ ಮುಂದೆ ಏನು ಮಾಡಬೇಕು, ಯಾವ ಕ್ರಮ ತೆಗೆದುಕೊಳ್ಳಬೇಕು ಎನ್ನುವುದನ್ನು ಅವರು ಮಾಡುತ್ತಾರೆ ಇನ್ನು ಗುಲ್ಬರ್ಗ ಜಿಲ್ಲೆ ಬಗ್ಗೆ ಮಾನ್ಯ ಸದಸ್ಯರು ಅಂಕಿಅಂಶಗಳನ್ನು ಕೇಳಿದರು ಆ ಅಂಕಿಅಂಶಗಳು ಈಗ ನನ್ನ ಹತ್ತಿರ ಇಲ್ಲ. ವಿವರಗಳನ್ನು ಬೇಕಾದರೆ ತರಿಸಿ ಕೊಡುತ್ತೇನೆ.

ಸುಬ್ರಮ್ಮಣ್ಯದಿಂದ ಹಿರೇಕೆರೂರ್‌ಗೆ ಬಸ್ಸು ಸಂಚಾರದ ಬಗ್ಗೆ

೨೯೭೨ ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತರೀಕೆರೆ ತಾಲ್ಲೂಕಿನ ಅಜ್ಜಂಪುರ ಬುಕ್ಕಾಂಬುಧಿ ಮುಖಾಂತರ ಚಿಕ್ಕಮಗಳೂರಿನಿಂದ ರೋಣಕ್ಕೆ ಮತ್ತು ಸುಬ್ರಹ್ಮಣ್ಯದಿಂದ ಹಿರೇಕೆರೂರಿಗೆ ಸರ್ಕಾರಿ ಬಸ್ಸುಗಳು ಸಂಚರಿಸುತ್ತಿದ್ದುದು ನಿಜವೇ ?

ಆ) ಈಗ ಸಂಚಾರವನ್ನು ನಿಲ್ಲಿಸಿರಲು ಕಾರಣವೇನು ? ಮತ್ತು ಪುನಃ ಈ ಸಂಚಾರವನ್ನು ಪ್ರಾರಂಭಿಸಿ ಜನರಿಗೆ ಅನುಕೂಲ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಸಿದ್ಧರಾಮಯ್ಯ (ಸಾರಿಗೆ ಮಂತ್ರಿಗಳು).—

ಅ) ನಿಜ.

ಆ) ಮಳೆಗಾಲದ ಪ್ರಯುಕ್ತ ಈ ಸಂಚಾರವನ್ನು ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ. ಮಳೆಗಾಲ ಕಳೆದ ನಂತರ ಅಂದರೆ ನವೆಂಬರ್ ೮೮ ರಿಂದ ಈ ಬಸ್ಸುಗಳನ್ನು ಪುನರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಈ ಉತ್ತರವು ಒಂದು ದುರ್ಬೈಪ ಉತ್ತರವೆಂದು ನಾನು ಭಾವಿಸುತ್ತೇನೆ ಅದಕ್ಕೆ ಕಾರಣ ಇಷ್ಟೆ ಅಧಿಕಾರಿಗಳು ನಿರ್ಲಕ್ಷತೆಯಿಂದ ಈ ಉತ್ತರವನ್ನು ಕೊಟ್ಟಿದ್ದಾರೆ ಎಂದು ಮಾನ್ಯ ಸಚಿವರಿಗೆ ಅನಿಸಲಿಲ್ಲವೇ ? ಈ ಮಾರ್ಗದಲ್ಲಿ ಮಳೆಗಾಲ ಬಂದರೆ ಬಸ್‌ನ್ನು ಓಡಿಸಬೇಡಿ ಎಂದು ಆ ಕ್ಷೇತ್ರದ ಜನರು ಹೇಳಿಲ್ಲ ವಿದ್ಯಾರ್ಥಿಗಳು ಹೇಳಿಲ್ಲ, ನಾನೂ ಹೇಳಿಲ್ಲ. ಸರ್ಕಾರಿ ಬಸ್‌ಗಳನ್ನು ಓಡಿಸಬೇಡಿ ಎಂದು ಖಾಸಗಿ ಬಸ್ ಮಾಲೀಕರು ಇವರಿಗೆ ಹೇಳಿರಬಹುದು. ಮಂಗಳೂರಿನಿಂದ ರೋಣಕ್ಕೆ ಮತ್ತು ಸುಬ್ರಹ್ಮಣ್ಯದಿಂದ ಹಿರೇಕೆರೂರಿಗೆ ಎರಡು ಬಸ್‌ಗಳು ಓಡುತ್ತಿದ್ದವು. ಈ ಬಸ್‌ಗಳನ್ನು ಇವರು ನಿಲ್ಲಿಸಿರುವುದರಿಂದ ವಿದ್ಯಾರ್ಥಿಗಳಿಗೆ ಮತ್ತು ರೈತರುಗಳಿಗೆ ಬಹಳ ತೊಂದರೆಯಾಗಿದೆ. ಮಳೆಗಾಲ ಬಂತೂ ಎಂದು ರೋಡ್‌ಗಳು ಗುಂಡಿ ಬಿದ್ದಿಲ್ಲ. ರೋಡ್‌ಗಳು ಚೆನ್ನಾಗಿ ಇವೆ. ಹೀಗಿದ್ದರೂ ಈ ರೀತಿಉತ್ತರ ಕೊಡಬೇಕಾದರೆ ಅಧಿಕಾರಿಗಳು ಜೇಜವಾಬ್ದಾರಿಯಿಂದ ಉತ್ತರ ಕೊಟ್ಟಿದ್ದಾರೆಂದು ಹೇಳಬೇಕಾಗುತ್ತದೆ. ನೀವುಗಾದರೂ ಈ ಉತ್ತರವನ್ನು ಸದನದಲ್ಲಿ ಹೇಳುವುದಕ್ಕೆ ಸ್ವಲ್ಪವೂ ಬೇಸರವಾಗಲಿಲ್ಲವೇ ? ಈ ಬಸ್‌ಗಳನ್ನು ಓಡಿಸಬೇಡಿ ಎಂದು ಖಾಸಗಿ ಬಸ್‌ನವರು ಹೇಳಿದ್ದಾರೆ. ಇದರ ಬಗ್ಗೆ ತಾವು ಎನ್‌ಕ್ವೈರಿ ಮಾಡಿಸಬೇಕು ಈ ಬಗ್ಗೆ ನಾನು ಈಗಾಗಲೇ ಎರಡು ಪತ್ರಗಳನ್ನು ತಮಗೆ ಬರೆದಿದ್ದೇನೆ. ಖಾಸಗಿಯವರ ಪ್ರಲೋಭನೆಗೆ ಒಳಗಾಗಿ ಈ ಬಸ್‌ಗಳನ್ನು ಓಡಿಸುತ್ತಿಲ್ಲ.

ಶ್ರೀ ಸಿದ್ಧರಾಮಯ್ಯ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಉತ್ತರವನ್ನು ಜೇಜವಾಬ್ದಾರಿಯಿಂದ ಕೊಟ್ಟಿದ್ದೇನೆಯೇ ಎಂದು ಹೇಳಿದ್ದಾರೆ ಈ ಉತ್ತರವನ್ನು ನಾನೇ ಜವಾಬ್ದಾರಿಯಿಂದಲೇ ಕೊಟ್ಟಿರುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಮಳೆಗಾಲದಲ್ಲಿ ಬಸ್‌ಗಳನ್ನು ನಿಲ್ಲಿಸಲಾಗುತ್ತದೆ ಎಂದರೆ,ಅದಕ್ಕೆ ಏನು ಕಾರಣ ?

ಶ್ರೀ ಎಸ್. ಬಂಗಾರಪ್ಪ.—ಜೇಜವಾಬ್ದಾರಿ ಉತ್ತರವನ್ನು ಜವಾಬ್ದಾರಿಯಿಂದ ತಾವು ಹೇಳಿದರೆ ಸಾಕು.